ಕರ್ನಾಟಕ ವಿಧಾನಸಭೆ

ಮಂಗಳವಾರ 23ನೇ ಮಾರ್ಚ್ 1999 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10-10ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್)ರವರು ಪೀಠವನ್ನು ಅಲಂಕರಿಸಿದ್ದರು.

1. ವಿಷಯ : ಸದನದಲ್ಲಿ ಸದಸ್ಯರ ಹಾಜರಾತಿ ಕುರಿತು :

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಭಾಧ್ಯಕ್ಷರೇ, ಇದು ಶಾಸನ ಸಭೆ ಆಡಳಿತ ಪಕ್ಷದಲ್ಲಿ ಮೂರು, ಜನ ಮಂತ್ರಿಗಳು ಮತ್ತು ನಾಲ್ಕು ಜನ ಶಾಸಕರು ಇದ್ದಾರೆ. ಇದು ಆಡಳಿತ ಪಕ್ಷದಲ್ಲಿರತಕ್ಕ ಗೊಂದಲವನ್ನು ತೋರಿಸುತ್ತದೆ. ಸರಕಾರ ಅಸ್ತಿತ್ವದಲ್ಲಿ ಇದೆಯೋ? ಅಥವಾ ಇಲ್ಲವೋ ಎಂಬುದು ಎದ್ದು ಕಾಣುತ್ತಿದೆ. ಅವರುಗಳಿಗೆ ಇವತ್ತಿನ ಸಭೆ ಹತ್ತು ಗಂಟೆಗೆ ಸೇರುತ್ತದೆ ಎಂಬುದು ಗೊತ್ತಿದೆಯೋ ಇಲ್ಲವೋ? ಈ ಪರಿಸ್ಥಿತಿಯನ್ನು ತಾವುಗಳು ಸ್ವಲ್ಪ ಕಣ್ಣುಬಿಟ್ಟು ನೋಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ತಾವುಗಳು ಸರಕಾರದವರಿಗೆ ಛೀಮಾರಿ ಹಾಕಬೇಕು. ಅನಂತರ ಸಭೆ ನಡೆಸಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಂತ್ರಿಗಳು ಬರುವವರೆಗೆ ಸಭೆಯನ್ನು ಮಾನ್ಯ ಅಧ್ಯಕ್ಷರು ಮುಂದೂಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಾವು ದಿನವೂ ಇದನ್ನೇ ಹೇಳುವುದಾಗಿದೆ.

ಶ್ರೀ ವಾಟಾಳ್ ನಾಗರಾಜ್: ಈಗ ಅವರುಗಳಿಲ್ಲದೆ ಸಭೆ ನಡೆಸುವುದು ಬೇಡ. ಮಾನ್ಯ ಅಧ್ಯಕ್ಷರೇ, ಅವರುಗಳು ಬಂದ ಮೇಲೆ ರಾಜ್ಯದ ಜನರು ಮತ್ತು ಈ ಸಭೆಯ ಕ್ಷಮಾಪಣೆಯನ್ನು ಕೇಳಬೇಕು. ಈ ರೀತಿಯಲ್ಲಿ ಸದನಕ್ಕೆ ಅಗೌರವ ಸಲ್ಲಿಸುವುದು ಸರಿಯಾದುದಲ್ಲ. ಇಲ್ಲಿ ಮುಖ್ಯಮಂತ್ರಿಗಳಾದಿಯಾಗಿ ಎಲ್ಲಿ ಮಂತ್ರಿಗಳು ನ್ಯಾಯಾಲಯದಂಥ ಈ ಸದನಕ್ಕೆ ಯಾರ್ಯಾರು ಅಗೌರವ ತೋರಿಸಿದ್ದಾರೋ ಅವರೆಲ್ಲರೂ ಬೇಷರತ್ತಾಗಿ ಕ್ಷಮೆ ಕೇಳಬೇಕು.

ಅಧ್ಯಕ್ಷರು : ಮುಖ್ಯಮಂತ್ರಿಗಳು ಇವೂತ್ತು ಲೋಹಿಯಾರವರ ಹುಟ್ಟುಹಬ್ಬದ ಸಮಾರಂಭದಲ್ಲಿ ಪಾಲ್ಗೊಳ್ಳುವುದಕ್ಕೆ ದಿವಂಗತ ಮಧುಲಿಮೆಯೆಯವರ ಶ್ರೀಮತಿ ಚಂಪಾ ಲಿಮೆಯೆಯವರು ಬಂದಿದ್ದರು. ಅವರು ಇಲ್ಲಿಗೆ ಬಂದಮೇಲೆ ಹೃದಯಾಘಾತವಾಗಿ ಅವರನ್ನು ಮಣಿಪಾಲ್ ಹಾಸ್ಪಿಟಲ್‌ಗೆ ಅಡ್ಮಿಟ್ ಮಾಡಿದ್ದಾರೆ. ಈ ವಿಷಯವನ್ನು ನನಗೆ ಈಗ ಮುಖ್ಯಮಂತ್ರಿಯವರು ತಿಳಿಸಿದಾಗ ಮೊದಲು ಆ ಕೆಲಸವನ್ನು ಅಟೆಂಡ್ ಮಾಡಿ ಬನ್ನಿ ಎಂದು ಹೇಳಿದ್ದೇನೆ. ಹೀಗಾಗಿ ಮಾನ್ಯ ಮುಖ್ಯಮಂತ್ರಿಯವರು ನನ್ನ ಅನುಮತಿಯನ್ನು ಪಡೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದವರಿಗೆ ಸಭೆ ಬೇಕಾಗಿಲ್ಲ. ಅವರಿಗೆ ಸಭೆಯ ಬಗ್ಗೆ ಗೌರವ ಇಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸನಸಭೆಗೆ ಸರಕಾರವು ಕೊಡುತ್ತಿರುವ ಗೌರವ ಇದೆಯೆ?

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, 50ಜನ ಮಂತ್ರಿಗಳು ಇದ್ದಾರೆ. ಒಬ್ಬ ಉಪ-ಮುಖ್ಯಮಂತ್ರಿ ಸಾಕಾಗುವುದಿಲ್ಲ ಎಂದು ಇನ್ನೊಬ್ಬರನ್ನು ಮಾಡಲು ಹೊರಟಿದ್ದಾರೆ. ಅವರನ್ನು ಕರೆಸಿ ಸಭಾಧ್ಯಕ್ಷರು ಛೀಮಾರಿ ಹಾಕಬೇಕು.

(ಗೊಂದಲ)

ಶ್ರೀ ಹೆಚ್.ಎಲ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೇ, ನಾನು ಒಂದು ಸಲಹೆಯನ್ನು ಕೊಡಲು ಬಯಸುತ್ತೇನೆ. ತಾವು ಈ ಸಭೆಯನ್ನು ಏಪ್ರಿಲ್ 5ನೇ ತಾರೀಖಿಗೆ ಅಡ್‌ಜರ್ನ್ ಮಾಡಿ. ಇವರಿಗೆ ಓಟ್ ಆನ್ ಅಕೌಂಟ್ ಕೊಡಬಾರದು. They are unfit to be a government. They are not interested in running the state of affairs. Why should we give money to them? Let there be a constitutional crisis because of their lapses every day. They are irresposible ministers, and irresponsible government.

MR. SPEAKER : Chief Minister should be spared.

ಶ್ರೀ ಕೆ.ಎಸ್. ಈಶ್ವರಪ್ಪ: ಜನರ ಹಣವನ್ನು ವೆಚ್ಚ ಮಾಡಲು 50ಜನ ಮಂತ್ರಿಗಳು ಇದ್ದಾರೆಯೇ? ಅವರಿಗೆ ಸದನದ ಕಾರ್ಯಕಲಾಪಗಳ ಬಗ್ಗೆ ಗೌರವ ಇಲ್ಲವೆ? ಏತಕ್ಕಾಗಿ ಇಷ್ಟು ಜನ ಮಂತ್ರಿಗಳು ಇದ್ದಾರೆ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಸದನದಲ್ಲಿ 5-6 ಜನ ಮಂತ್ರಿಗಳು ಕೂಡ ಇಲ್ಲ. ತಾವುಗಳು ದಯಮಾಡಿ ಸದನವನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು: ಮಾನ್ಯ ನಂಜೇಗೌಡರು ಮಾತನಾಡುವ ರಭಸದಲ್ಲಿ ಮುಖ್ಯಮಂತ್ರಿಗಳ ಬಗ್ಗೆ ಹೇಳಿದರು. ನಾನು ಅದಕ್ಕೆ ವಿವರಣೆ ಕೊಟ್ಟಿದ್ದೇನೆ. Do you insist that it should be applied to the chief Minister also? ಎಂದು ಹೇಳಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಚೀಫ್ ಮಿನಿಸ್ಟರ್‌ರವರು ಫೋನ್ ಮಾಡಿ ಕಾರಣವನ್ನು ತಮಗೆ ತಿಳಿಸಿ ಅನುಪಸ್ಥಿತಿಯ ಬಗ್ಗೆ ವಿವರ ನೀಡಿದ್ದಾರೆಂದು ತಾವುಗಳು ಹೇಳಿದ್ದೀರಿ. ಅವರ ಅನುಪಸ್ಥಿತಿಯನ್ನು ಎಕ್ಸ್‌ಕ್ಯೂಸ್ ಮಾಡಬಹುದು. ಅದರೂ ಕೂಡ XXX ಏಕೆ ಆಗುತ್ತಾರೆ ಅಂದರೆ ಮಂತ್ರಿಮಂಡಲದಲ್ಲಿ 49ಜನ ಮಂತ್ರಿಗಳು ಇದ್ದಾರೂ ಕೂಡ ಮುಖ್ಯಮಂತ್ರಿಗಳ ಮಾತಿಗೆ ಬೆಲೆ ಕೊಡದೆ ಸದನಕ್ಕೆ ಒಬ್ಬರೂ ಬರುವುದಿಲ್ಲವೆಂದರೆ ಇದರ ಅರ್ಥ ಏನು? They are not behaving responsibly. ಅಥವಾ ಮುಖ್ಯಮಂತ್ರಿಗಳ ಕಂಟ್ರೋಲ್ ಇವರುಗಳ ಮೇಲೆ ಇಲ್ಲವೆಂದಾಯಿತು. ಇವರ ಮಾತಿಗೆ ಬೆಲೆ ಇಲ್ಲ ಎಂದಾಯಿತು. ಇವರ ಸರಕಾರವು ಚಲ್ತೀ ಕಾ ನಾಮ್ ಗಾಡಿ ಎಂಬ ಹಾಗೆ ನಡೆಯುತ್ತಾ ಇದೆ. ಮುಖ್ಯಮಂತ್ರಿಗಳು ಇರಲಿಲ್ಲ ಅಂದರೆ ಅವರ ಪರವಾಗಿ ಜವಾಬ್ದಾರಿಯಿಂದ ಬೇರೆಯವರೊಬ್ಬರು ಉಪಸ್ಥಿತರಿದ್ದು ಉಳಿದವರನ್ನು ಜೊತೆಗೆ ಸೇರಿಕೊಂಡು ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಇವೊತ್ತಿನ ಪ್ರಶ್ನೆಗಳ ಪಟ್ಟಿಯಲ್ಲಿರುವ ಅಜೆಂಡಾವನ್ನು ನೋಡಿಲ್ಲವೆ? ಅದರಲ್ಲಿ ಉತ್ತರಿಸಲು ಬೇಕಾಗುವ ಮಂತ್ರಿಗಳಾದರೂ ಇಲ್ಲಿ ಹಾಜರಿರುವ ಅವಶ್ಯಕತೆ ಇಲ್ಲವೆ? ಅವರುಗಳು ಅಜೆಂಡಾವನ್ನು ಕೂಡಾ ಸರಿಯಾಗಿ ನೋಡುವುದಿಲ್ಲ ಎಂದು ಕಾಣುತ್ತದೆ.

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

Even 50%. We don't expect 100% because no individual will give that much attention. When important subject is coming up for discussion, where are the persons who are responsible to reply that; who are the persons to take down that?

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ ತಾವುಗಳು ಕೂಡ ಎಷ್ಟೋ ಸಾರಿ ಅವರ ಗೈರುಹಾಜರಿಯ ಬಗ್ಗೆ ಸಾಕಷ್ಟು ಹೇಳಿದ್ದೀರಿ. ಆದರೂ ಅದನ್ನು ಗೌರವಿಸುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಈ ಸರಕಾರದ ಬೇಜವಾಬ್ದಾರಿತನವನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ. ಪರಿಶಿಷ್ಟ ಜನಾಂಗದವರ ಬಗ್ಗೆ ಚರ್ಚೆ ಇದ್ದರೂ ಮಂತ್ರಿಗಳು ಹಾಜರಿಲ್ಲ (ಮಾನ್ಯ ಬಿಜೆಪಿ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಮಾನ್ಯ ಅಧ್ಯಕ್ಷರೇ, ಇವರು ಎಸ್.ಸಿ, ಎಸ್.ಟಿ ಯವರಿಗೆ ಅನ್ಯಾಯ ಮಾಡಿದ್ದಾರೆ. ಇವರಿಗೆ ಅವರ ಬಗ್ಗೆ ಕಾಳಜಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ದಯಮಾಡಿ ಮಾನ್ಯ ಅಧ್ಯಕ್ಷರು ಸದನವನ್ನು ಏಪ್ರಿಲ್ 5ನೇ ತಾರೀಖಿನವರೆಗೆ ಮುಂದಕ್ಕೆ ಹಾಕಬೇಕು ಎಂದು ನನ್ನ ಪ್ರಾರ್ಥನೆ.

(ಗೊಂದಲ)

ಶ್ರೀ ಬಿ. ಸೋಮಶೇಖರ್(ಕಂದಾಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇದು ಆಗಬಾರದಿತ್ತು. ಕೆಲವು ಸಂದರ್ಭಗಳಲ್ಲಿ ಅವರು ಸರ್ಕಾರದಲ್ಲಿದ್ದಾಗಲೂ ಈ ರೀತಿ ಆಗಿದೆ. ಇದನ್ನೇ ದೊಡ್ಡದು ಮಾಡಿಕೊಳ್ಳದೆ ತಾವು ಸಭೆಯನ್ನು ಕರೆದಿದ್ದೀರಿ. ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ಆಗಿರುವುದಕ್ಕೆ ವಿಷಾದವನ್ನು ವ್ಯಕ್ತಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಇದು ಕ್ಷಮಾಪಣೆ ಮಾಡುವ ಪರಿಸ್ಥಿತಿ ಅಲ್ಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಈಗ ಪ್ರಶ್ನೋತ್ತರ ವೇಳೆ ನಡೆಯಲಿ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್‌ನಾಗರಾಜ್: ಯಾರು ಉತ್ತರ ಕೊಡುತ್ತಾರೆ ? ಯಾರಿಗೆ ಗೌರವ ಇದೆ ಉತ್ತರ ಕೊಡುವುದಕ್ಕೆ. ಈ ಪ್ರಶ್ನೆಗಳನ್ನು ಹರಿದು ಬಿಸಾಕುತ್ತೇವೆ. ಈ ಪ್ರಶ್ನೆಗಳು ಯಾರಿಗೆ ಬೇಕು? ಏತಕ್ಕೆ ಬೇಕು? ಯಾವುದೂ ಬೇಕಾಗಿಲ್ಲ. ಯಾವ ಉದ್ದೇಶಕ್ಕಾಗಿ ಬೇಕಾಗಿದೆ? ಯಾರಿಗೂ ಉತ್ತರ ಕೊಡುವ ಯೋಚನೆ ಇಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ರವರು ಪ್ರಶ್ನೆ ಪಟ್ಟಿಯನ್ನು ಹರಿದು ಹಾಕಿದರು)

ಅಧ್ಯಕ್ಷರು: ನಿಮಗೆ ಇನ್ನು ಏನು ಸಿಗುತ್ತದೆ ಹರಿಯುವುದಕ್ಕೆ ? ಮೊದಲು ಪ್ರಶ್ನೋತ್ತರಗಳು ಇಲ್ಲ.

(ಗೊಂದಲ)

ಶ್ರೀ ಬಿ.ಸೋಮಶೇಖರ್: ತಾವು ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ ಅಷ್ಟು ಹೊತ್ತಿಗೆ ನಾವು ಕರೆಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಇದು ಅರಳಿ ಮರದ ಕೆಳಗೆ ನಡೆಯುವ ಸಭೆಯಲ್ಲ. ಸಂವಿಧಾನಾಬದ್ದವಾದಂಥ ಪ್ರಜಾತಂತ್ರ ವ್ಯವಸ್ಥೆಯ ಶಾಸನಸಭೆ ಇದು. ಪಂಚಾಯಿತಿ ಕಟ್ಟೆಯಲ್ಲ ಯಾವಾಗ ಬೇಕಾದರೂ ಆಗ ಸಭೆ ನಡೆಯುವುದಕ್ಕೆ.

ಅಧ್ಯಕ್ಷರು: ಮಾನ್ಯ ಖರ್ಗೆಯವರು ನೀವು ಹೊರಟುಬಿಟ್ಟರೆ ಕೋರಂ ಇರುವುದಿಲ್ಲ.

SRI M. MALLIRKARJUNA KHARGE: We are interested indiscussion. Therefore, with all humility we are standing here.

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೇ, ಮೊದಲನೆಯದು ರೂಲ್ 69ರ ಕೆಳಗೆ ಚರ್ಚೆ ಮಾಡುವುದು ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾರು ಇದ್ದಾರೆ.

ಶ್ರೀ ವಿ.ಸೋಮಣ್ಣ : ಮಾನ್ಯ ಸೋಮಶೇಖರ್‌ರವರು ಈಗಾಗಲೇ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನಖರ್ಗೆ : ಅವರು ಇದಕ್ಕೆ ಉತ್ತರ ಕೊಡುತ್ತಾರೇನು?

ಶ್ರೀ ವಾಟಾಳ್ ನಾಗರಾಜ್ : ಈಗ ನೀವು ಬಂದಿರುವವರು ರಾಜೀನಾಮೆಯನ್ನು ಕೊಡಿ. ಸರ್ಕಾರದ ಈ ನೀತಿಯನ್ನು ನೋಡಿ ನೀವೆಲ್ಲಾರಾಜೀನಾಮೆಯನ್ನು ಕೊಡಿ. ಆಗ ನಿಮಗೆ ಗೌರವ ಬರುತ್ತದೆ.

ಶ್ರೀ ಹೆಚ್.ಎನ್ ನಂಜೇಗೌಡ : ಈಗ ಅನೇಕ ಮುಖ್ಯಮಂತ್ರಿಗಳು ಫಂಕ್ಷನ್ ಮಾಡುವುದನ್ನು ನೋಡಿದ್ದೇನೆ. ಪ್ರಧಾನ ಮಂತ್ರಿಗಳು ಫಂಕ್ಷನ್ ಮಾಡುವುದನ್ನು ನೋಡಿದ್ದೇನೆ. ಪಾರ್ಲಿಮೆಂಟ್‌ನಲ್ಲೂ ಹಾಗೆ ಮಾಡುತ್ತಾರೆ, ಲೋಕಸಭೆಯಲ್ಲಿ ಇಂಥವರು ಇಷ್ಟು ಗಂಟೆಯವರೆಗೆ, ರಾಜ್ಯಸಭೆಯಲ್ಲಿ ಇಂಥವರು ಇಷ್ಟು ಗಂಟೆಯವರೆಗೆ ಇರಬೇಕೆಂದು ಮಾಡಿರುತ್ತಾರೆ. ಅಲ್ಲ ಬರದಿದ್ದರೆ ಮಂತ್ರಿಗಳನ್ನು ಫುಲ್ ಅಪ್ ಮಾಡುವವರು ಇದು ಮುಖ್ಯಮಂತ್ರಿಯವರು ಮಾಡಬೇಕಾದ ಕೆಲಸ. ಇಲ್ಲೂ ಅದೇ ರೀತಿ ಹಿಂದೆ ನಡೆಯುತ್ತಿತ್ತು. ಇಲ್ಲಿ ಏನಾಗಿದೆ ಎಂದರೆ ಯಾರನ್ನು ಕಂಡರೂ ಯಾರಿಗೂ ಭಯ ಹೆದರಿಕೆ, ಭೀತಿ ಎನ್ನುವುದೇ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಪುರುಸೊತ್ತು ಇಲ್ಲ. ಪುರುಸೊತ್ತು ಎಂದರೆ ಗೊತ್ತಾಗುತ್ತದೆ. ದಮಡಿ ಎಂದರೆ ಗೊತ್ತಲ್ಲ. ಕವಡಿಯದು ಅಮ್ಮಾನಿ ಇಲ್ಲ. ಏನೂ ಕೆಲಸವೇ ಇಲ್ಲವಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಈ ಸಭೆಯನ್ನು ಭಾರೀ ನಿಕೃಷ್ಟವಾಗಿ ಕಾಣುತ್ತಿದೆ ಸರ್ಕಾರ.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ಸದನವನ್ನು ಮುಂದಕ್ಕೆ ಹಾಕಿ. 5ನೇ ತಾರೀಖಿನವರೆಗೂ ಸದನವನ್ನು ಮುಂದಕ್ಕೆ ಹಾಕಿ. ತಮ್ಮ ಕಾರ್ಯಾಲಯಕ್ಕೆ ಅವರೆಲ್ಲಾ ಬರಲಿ.

(ಗೊಂದಲ)

ಅಧ್ಯಕ್ಷರು: ಎಷ್ಟು ತಮಾಷೆ ಎಂದರೆ ಎಂಟೂವರೆಗೆ ಒಬ್ಬ ಮಂತ್ರಿ ಮನೆಗೆ ಫೋನ್ ಮಾಡಿದ್ದೆ ಏನೂ ಕೆಲಸ ಇತ್ತು ಎಂದು. ಎಂಟೂವರೆಗೆ ಫೋನ್ ಮಾಡಿದರೆ ವಾಕಿಂಗ್‌ಹೋಗಿದ್ದಾರೆ ಎಂದರು. ಇವರು ವಾಕಿಂಗ್ ಎಷ್ಟು ಹೊತ್ತಿಗೆ ಶುರುಮಾಡುತ್ತಾರೆ ಎಂದು ಆಶ್ಚರ್ಯಪಟ್ಟೆ ನಾವೆಲ್ಲಾ ಐದು ಗಂಟೆಗೆ ವಾಕಿಂಗ್‌ಗೆ ಹೋಗಿ ಆರೂವರೆ ಗಂಟೆಗೆ ವಾಪಸ್ ಬರುತ್ತೇವೆ. ಇವರು ಎಂಟೂವರೆ ಗಂಟೆಗೆ ವಾಕಿಂಗ್‌ಗೆ ಹೋಗಿದ್ದಾರೆ. ಯಾರೋ ಒಬ್ಬರು ಮಿನಿಸ್ಟರ್.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ 11 ಗಂಟೆಗೆ ಸಭೆ ಸೇರುವುದು ವಾಡಿಕೆ. ಇವತ್ತು 11 ಗಂಟೆಗೆ ಬದಲಾಗಿ 10 ಗಂಟೆಗೆ ಸೇರಿದ್ದು ಸ್ವಲ್ಪ ವ್ಯತ್ಯಾಸವಾಗಿದೆ.

ಅಧ್ಯಕ್ಷರು: ಹಾಗಲ್ಲ. ಮಾನ್ಯ ಬೈರೇಗೌಡರೇ, ನಾನೇನು ಹೇಳುತ್ತೇನೆ ಎಂದರೆ ತಾವು 72ನೇ ಇಸವಿಯಲ್ಲಿ ಈ ಸದನಕ್ಕೆ ಬಂದವರು. ಹಾಗೆಯೇ ಮೊಯಿಲಿಯವರು, ಖರ್ಗೆಯವರು ಎಲ್ಲಾ ಬಂದರು. ನಂಜೇಗೌಡರು, ವಾಟಾಳರು 67ನೇ ಇಸವಿಗೆ ಇಲ್ಲಿ ಬಂದಂಥವರು. ನಮ್ಮ ಪ್ರಜಾಪ್ರಭುತ್ವದ ಬಗ್ಗೆ ದಿವಸ ದಿವಸ ನಾನು ಇದನ್ನೇ ಎಲ್ಲಾ ಸಭೆಗಳಲ್ಲೂ ಹೇಳುವುದು. ಕೆಲವರಿಗೆ ನಾನು ಹೇಳುವುದು ಹಿಡಿಸುವುದಿಲ್ಲ. ಬಹಳ ಕೆಳಕ್ಕೆ ಇಳಿಯುತ್ತಿದ್ದೇವೆ. ಈ ಸಭೆಯ ಪ್ರಾಮುಖ್ಯತೆ ಏನು, ಮಂತ್ರಿಗಳು ಏಕೆ ಆಗಬೇಕು. ಅವರಿಗೆ ಏನು ಜವಾಬ್ದಾರಿ ಇರುತ್ತೆ, ಅವರು ಹೇಗೆ ನಡೆದುಕೊಳ್ಳಬೇಕು. ಯಾವುದನ್ನೂ ಯಾರಿಗೂ ತಿಳಿದುಕೊಳ್ಳುವುದು ಅಗತ್ಯ ಇಲ್ಲ. ತಿಳಿ ಹೇಳುವವರು ಇಲ್ಲ. ಇದೊಂದು ತರಹ ಆಗಿದೆ. ಪ್ರಜಾಪ್ರಭುತ್ವ ಬಂದದ್ದು ಹೇಗೆ ಹೇಳಿ ಪ್ರಪಂಚಕ್ಕೆ ರಾಜರ ತಾನಾಶಾಹಿ ಪ್ರವೃತ್ತಿಯನ್ನು ನೋಡಿ 11ನೇ ಸೆಂಚುರಿಯಲ್ಲಿ ಜನ ರಿವೋಲ್ಟ್ ಆಗಿ ಅಲ್ಲಿಂದ ಸ್ಟಾರ್ಟ್ ಆಗಿ 1215ರಲ್ಲಿ ಮ್ಯಾಗ್ನಾಕಾರ್ಟ್ ಬಂದು ಅಲ್ಲಿ ಕೆಲವು ಡಿಸಿಲ್ಲಿನ್ ಮಾಡಿ ಆದಾಗದೆ ಎದ್ದು ಬಿದ್ದು ಲಾಸ್ಟ್‌ಗೆ ಕಾಮನ್ಸ್ ಬಂದ ಮೇಲೆ ಒಂದು ರೂಪ ತಾಳಿತ್ತು. ಇಷ್ಟು ದೊಡ್ಡ ಇತಿಹಾಸ ಪ್ರಜಾಪ್ರಭುತ್ವಕ್ಕೆ ಇದೆ. ಪ್ರಜೆಗಳ ಅಭಿಪ್ರಾಯಕ್ಕೆ ಪ್ರಾಮುಖ್ಯತೆ ಇರಬೇಕು. ಏನೋ ನಮ್ಮ ಜನರಿಗೆ ಏನಾಗಿದೆ ಎಂತಲೇ ಗೊತ್ತಿಲ್ಲ. ನೀವು ನಮ್ಮ ಮನೆಗೆ ಬರುತ್ತೀರಿ. ನೀವೆಷ್ಟು ಸೀನಿಯರ್ ನನಗಿಂತ, ವಯಸ್ಸಿನಲ್ಲಿ, ಅನುಭವದಲ್ಲಿ ಸಭೆ ಸಮಾರಂಭಗಳಲ್ಲಿ ಕೋಲಾರದಲ್ಲಿ ನೋಡಿದ್ದೇನೆ. ಎಷ್ಟು ಗೌರವದಿಂದ ನೀವು ನನ್ನನ್ನು ನಡೆಸಿಕೊಳ್ಳುತ್ತೀರಿ . ನಿಮ್ಮ ಅನೇಕ ಜನರಿಗೆ ನಾವೆಲ್ಲಾ ಲೆಕ್ಕಕ್ಕೆ ಇಲ್ಲ ನಾನು ಗುಮಾಸ್ತನ ತರಹ. ನಿಜ ಹೇಳುತ್ತೇನೆ. ಬಹಳ ದುಃಖದಿಂದ ಹೇಳುತ್ತೇನೆ. ಅವರೆಲ್ಲಾ ಈ ಮೌಲ್ಯಗಳು ಏನು ಇದ್ದಾವೆ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಇನ್ಸ್‌ಟಿಟ್ಯೂಷನ್ಸ್ ಇವೆಲ್ಲಾ, ಈ ಮೌಲ್ಯಗಳ ಬಗ್ಗೆ ಅವರಿಗೆ ಗೊತ್ತೇ ಇಲ್ಲ. ನಾವು ಏನು ಹೆಚ್ಚು ಮಾತನಾಡುವ ಹಾಗೆ ಇಲ್ಲ. ಜನರು ಆಯ್ಕೆ ಮಾಡಿದ್ದಾರೆ. ಅವರು ಇಲ್ಲಿಗೆ ಬಂದಿದ್ದಾರೆ. ನಾವು ಅವರನ್ನು ಸರಿದೂಗಿಸಿಕೊಂಡು ಹೋಗಬೇಕಾಗಿ ಬಂದಿದೆ. ದುಃಖವಾಗುತ್ತದೆ. ದಿವಸಾ ಇದೊಂದು ಸೀನ್. ಅವರು ಏಳುವುದು ಗಲಾಟೆ ಮಾಡುವುದು, ನೀವೇನೂ ಒಂದು ಹೇಳುವುದು.ನಿನ್ನೆ ನಾವು 10 ಗಂಟೆಗೆ ಸೇರುತ್ತೇವೆ ಎಂದು ತೀರ್ಮಾನ ಮಾಡಿದ್ದೇವೆ. 10 ರಿಂದ 11 ಗಂಟೆಗೆ ನಾವೆಲ್ಲಾ ಇಲ್ಲಿ ಸೇರಿದಾಗ ಫಸ್ಟ್ 69ರಲ್ಲಿ ಚರ್ಚೆ. 11 ರಿಂದ 12 ಗಂಟೆಗೆ ಪ್ರಶ್ನೋತ್ತರ ಎಂದು ತಿಳಿದುಕೊಂಡೆವು. ಮೆಂಬರ್ಸ್ ಎಂದರೆ ಆ ಕಡೆ ಮೆಂಬರ್ಸ್ ಆಗಬಹುದು, ಈ ಕಡೆ ಮೆಂಬರ್ಸ್ ಆಗಬಹುದು. ಅಜೆಂಡಾ ನೋಡ ಬೇಕು. ಅಸೆಂಬ್ಲಿ ಇದ್ದಾಗ ಬೇಗ ರೆಡಿಯಾಗಬೇಕು. ಬರಬೇಕು, ಕುಳಿತಿರಬೇಕು. ಮಧ್ಯೆ ಯಾವುದಕ್ಕಾದರೂ ಇಂಟರ್‌ವಿನ್ ಆಗಬೇಕು, ಕೇಳಬೇಕು,

ತಿಳಿದುಕೊಳ್ಳಬೇಕು. ಏನಾದರೂ ಇದೆಯಾ ಹೇಳಿ ನಿಮ್ಮ ತಂದೆಯವರು ಪಾರ್ಲಿಮೆಂಟ್‌ನಲ್ಲಿದ್ದಿರಾ ಅಸೆಂಬ್ಲಿಯಲ್ಲಿದ್ದಿರಾ ನಿಮಗೆ ಟ್ರೈನಿಂಗ್ ಆಗಿತ್ತಾ. ಆ ಕನ್‌ಸರ್ನ್ ಮನುಷ್ಯನಿಗೆ ಮೂಲತಃ ಸಾರ್ವಜನಿಕ ಬದುಕಿನಲ್ಲಿರುವವರಿಗೆ ನಾವು ಏಕೆ ಇಲ್ಲಿ ಬಂದಿದ್ದೇವೆ ಎನ್ನತಕ್ಕಂಥ ಕನಿಷ್ಟ ಪ್ರಜ್ಞೆ ಇದ್ದರೆ ಇವೆಲ್ಲಾ ಬರುವುದೇ ಇಲ್ಲ. ಈ ಸಮಸ್ಯೆಗಳೇ ಬರುವುದಿಲ್ಲ. ಎಂಥ ಹೀನಸ್ಥಿತಿ ನೋಡಿ ಯಾರನ್ನು ನಾವು ದೂಷಣೆ ಮಾಡುವುದು ? ಯಾರಿಗೆ ಹೇಳುವುದು. ಏನೋ ಒಂದು ಆಪಾದನೆ ಅವರು ಮಾಡುವುದು, ಅದಕ್ಕೆ ನೀವು ಉತ್ತರ ಕೊಡುವುದು ಲೋಕಾಭಿರಾಮವಾಗಿ ಬೇರೇನೆ ಆಯಿತು. ಏಕೋ ಮನಸ್ಸಿಗೆ ಸಮಾಧಾನವೇ ಆಗುವುದಿಲ್ಲ. ಎಷ್ಟೂಂತ ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ತಮ್ಮ ವೈಯಕ್ತಿಕ ಪ್ರಶ್ನೆಯೂ ಅಲ್ಲ.

MR. SPEAKER : I am talking about the whole system.

SRI MALLIKARJUNAKHARGE : They have to respect the House.

MR. SPEAKER : That is what I am telling.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗ್ಯಾರಿಗೂ ಅವರು ಉಪಕಾರ ಮಾಡುತ್ತಿಲ್ಲ. ಇದು ಅವರ ಕರ್ತವ್ಯ.

ಅಧ್ಯಕ್ಷರು : ಮಿನಿಮಮ್ ನಾನು ಹೇಳುತ್ತೇನೆ ಭೈರೇಗೌಡರೇ, ಅಜೆಂಡಾ ನೋಡುವುದಿಲ್ಲ ನಮ್ಮ ಮೆಂಬರ್ಸ್.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮೊದಲು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಿ ಎಂದು ಹೇಳುವುದು. ಅಜೆಂಡಾನೇ ನೋಡಿಲ್ಲ, ಅಂದರೆ ಅಜೆಂಡಾ ನೋಡದೆ ಇರುವಷ್ಟು ಪುರುಸೊತ್ತು ಇಲ್ಲ. ಹಿಂದೆ ನಾನು ಇದ್ದಾಗ ನಿಮಗೆ ಕೇಳುವುದಕ್ಕೆ ಶಕ್ತಿ ಇರಲಿಲ್ಲ. ನನಗೆ ಶಕ್ತಿ ಇದೆ, ಕೇಳುತ್ತೇನೆ. ಸುಮ್ಮನೇ ಅದೇ ಮಾತನ್ನು ಆಡಬೇಡಿ. ನೀವು ಹೀಗೆಯೇ ಮಾಡಿದ್ದೀರೇನು? ಹಾಗೆಯೇ ಮಾಡಿದ್ದೀರಿ ಎಂದು ಹೇಳಬೇಡಿ ನಾಲ್ಕು ಜನ ಇದ್ದರು. ನೀವೇ ಅವರಿಗೆ ಹೇಳಿ. ನಾವು ಕುಳಿತು ಸೌಜನ್ಯದಿಂದ ನಿಮ್ಮ ಮಾತು ಕೇಳುವುದು. ಇಲ್ಲಿ ನಾಲ್ಕು ಜನ ಮಂತ್ರಿಗಳು ಇದ್ದರು ಬರೇ ನಾಲ್ಕು ಜನ ಇದ್ದರು ತಮಗೆ ಗೊತ್ತಿದೆ ಮೆಂಬರ್ಸ್ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರಿಗೆ ಹೇಳಿದ್ದೇವೆ. ನಾನೇ ಹೊರಗಡೆ ಹೊರಟು ಹೋಗೋಣ ಬನ್ನಿ. ಎಲ್ಲಾ ಹೊರಗಡೆ ಹೊರಟು ಹೋಗೋಣ. ನಮ್ಮದೇನೂ ಬೇರೆ ವಿಚಾರ ಇಲ್ಲ. ವಿಧಿ ಇಲ್ಲದೇ ಅಸಹಾಯಕತೆಯಿಂದ ಹೋಗಬೇಕಾಗಿದೆ. ತಮಗೆ ಬಹಳ ಗೌರವ ಕೊಟ್ಟಿರುತ್ತೇವೆ. ಈ ಸದನದ ಗಾಂಭೀರ್ಯ, ಗೌರವ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನಕ್ಕೆ ಇರತಕ್ಕಂಥ ಎತ್ತರವಾದಂತಹ ಶಕ್ತಿ ಯಾರಿಗೂ ಅರ್ಥವಾಗಿಲ್ಲ. ಪಾಮಾಣಿಕವಾಗಿ ಹೇಳುತ್ತೇನೆ. ನಾನು 1967ನೇ ಇಸವಿಯಿಂದ ಇದ್ದೇನೆ. ನಂಜೇಗೌಡರು 1967ರಲ್ಲಿ ಇದ್ದರು. 1967ರಲ್ಲಿ ಈ ಸದನ ತುಂಬಿರುತ್ತಿತ್ತು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ ವಿಚಾರವನ್ನು ನಾನು ಹೇಳಿದೆ. ಇವತ್ತು ಲೋಹಿಯಾರವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಹೇಳಿ ಶ್ರೀಮತಿ ಮಧುಲಿಮಯೆ ಅವರು

ಬಂದಿದ್ದರು. ದುರಾದೃಷ್ಟವಶಾತ್ ಇಲ್ಲಿಗೆ ಬಂದು ಲ್ಯಾಂಡ್ ಆದ ಮೇಲೆ she has had a massive heart attack. She is admitted to Manipal Hospital. ಸಿ.ಎಂ. ಅವರು ನನಗೆ ದೂರವಾಣಿ ಮಾಡಿ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ. ನಾನು ಹೇಳಿದೆ, that is more important, ತಾವು ಹೋಗಿ ಎಂದು ಹೇಳಿದೆ. ಸಾಯಂಕಾಲದ ಕಾರ್ಯಕ್ರಮ ಇತ್ತಲ್ಲ. ಅದಕ್ಕೆ ಶ್ರೀಮತಿ ಚಂಪಾ ಲಿಮಯೆ ಅವರು ಬಂದಿದ್ದರಲ್ಲ, ಅವರಿಗೆ ಹಾರ್ಟ್ ಅಟ್ಯಾಕ್ ಆಗಿದೆ. ಅವರು ಅಲ್ಲಿ ಆಡ್ಮಿಟ್ ಆಗಿದ್ದಾರೆ. ಸಿ.ಎಂ.ಅವರು ಅಲ್ಲಿಗೆ ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬರಲಿ, ನಾನು ಚರ್ಚೆ ಮಾಡೋಣ. But as far as this issue is concerned, let the whole Karnataka people know, all their voters should know how they are behaving, how this Government is behaving. ಜನರಿಗೆ ಇದು ಗೊತ್ತಾಗಲಿ, ಯಾವ ರೀತಿ ನಡೆದಿದೆ ಎಂದು ಗೊತ್ತಾಗಲಿ. ಅದಕ್ಕಾಗಿ ನಾವಂತೂ ಕೊಡುವುದಕ್ಕೆ ಆಗುವುದಿಲ್ಲ. ವಾಕೌಟ್ ಮಾಡುತ್ತೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಕಾಂಗ್ರೆಸ್ ಸದಸ್ಯರುಗಳೊಂದಿಗೆ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್: ನಾವೂ ಸಭಾತ್ಯಾಗ ಮಾಡೋಣ. ಬೇರೆ ವಿಧಾನೇ ಇಲ್ಲ.

ಶ್ರೀ ಬಿ.ಸೋಮಶೇಖರ್ : ಮಾನ್ಯ ಖರ್ಗೆಯವರು ಸ್ವಲ್ಪ ಕೇಳಬೇಕು.

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ : ಸಾರ್ ಅಜೆಂಡಾ ಪ್ರಕಾರ ನಿಯಮಾವಳಿ 69ರ ವಿಚಾರ ಇದೆ 69ರ ವಿಚಾರ ಒಂದು ಗಂಟೆ ನಡೆಯುತ್ತದೆ ಎಂದು ಎಲ್ಲರಿಗೂ ಗೊತ್ತಿದೆ. ಆ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸಭಾಧ್ಯಕ್ಷರ ಅನುಮತಿ ಪಡೆದುಕೊಂಡು ಹೋಗಿದ್ದಾರೆ. ಸಿ.ಎಂ. ಆನ್ಸರ್ ಮಾಡಬೇಕಾದ ಸಬ್ಜೆಕ್ಟ್. ಮಾನ್ಯ ಖರ್ಗೆಯವರ ವಿನಂತಿ ಮೇರೆಗೆ ನಿನ್ನೆಯ ಕಾಲಿಂಗ್ ಅಟೆನ್ಷನ್ ಇವತ್ತು ಬೆಳಿಗ್ಗೆ ಹಾಕಿಕೊಂಡಿದ್ದು ಸಿ.ಎಂ. ಅವರು ಹೇಗೆ ಹೋಗಿದ್ದಾರೆ. ಒಂದು ಗಂಟೆಯವರೆಗೆ ಸಿ.ಎಂ. ವರ್ಕ್ ಇರುತ್ತೆ ಎಂದು ತಿಳಿದುಕೊಂಡಿರುತ್ತಾರೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ಅಜೆಂಡಾ ಪ್ರಕಾರವೇ ಹೋಗಬೇಕು ಎಂದಾಗ ಸದನ ಸೇರಿದಾಗ ಇಲ್ಲಿ ಆರು ಜನ ಇರಲಿಲ್ಲ. ಆರು ಜನ ಇಲ್ಲದಿದ್ದರೂ ಕೂಡ ಸದನ ನಡೆಸಿ, ಅದು ನಿಮ್ಮ ಜವಾಬ್ದಾರಿ ಎಂದು ಹೇಳುತ್ತೀರೇನು ಪ್ರತಿ ದಿವಸ ನಾವು ಹೇಳುತ್ತೇವೆ. ಅಧ್ಯಕ್ಷರು ಹೇಳಿದರೂ ನಿಮಗೆ ಲೆಕ್ಕ ಇಲ್ಲ. ನಾವು ಪ್ರತಿಭಟನೆ ಮಾಡಿದರೂ ಲೆಕ್ಕ ಇಲ್ಲ. ಈ ಸದನಕ್ಕೆ ಯಾವುದೇ ರೀತಿಯಲ್ಲಿ ಬೆಲೆ ಕೊಡದೇ ಇರುವಾಗ ನೀವು ಹೇಳಿದ ಹಾಗೆ ಸದನ ನಡೆಸಿಕೊಂಡು ಹೋಗಬೇಕು ಎಂದರೆ ಆಗುವುದಿಲ್ಲ. ನೀವು ಹಾಗಾದರೆ ಸದನವನ್ನು ನಡೆಸಿಕೊಂಡು ಹೋಗಿ.

ಶ್ರೀ ಎಚ್.ಎನ್.ನಂಜೇಗೌಡ : ಮಾನ್ಯ ಅಧ್ಯಕ್ಷರೆ, ನನಗೆ ವಾಕೌಟ್ ಮಾಡಲು ಇಷ್ಟ ಇಲ್ಲ ದಯವಿಟ್ಟು ಸಭೆಯನ್ನು ಮುಂದೂಡಿ. ಸಭೆ ಹೇಗೆ ನಡೆಸುತ್ತೀರಿ ?

ಶ್ರೀ ಕೆ.ಎನ್. ನಾಗೇಗೌಡ : ಕೋರಂ ಇದೆಯಲ್ಲಾ.

ಶ್ರೀ ಎಚ್.ಎನ್.ನಂಜೇಗೌಡ : ಕೋರಂ ಇದ್ದರೆ ಹಾಗಾದರೆ ನೀವೇ ಸಭೆ ನಡೆಸಿಕೊಳ್ಳಿ. ನಾನೂ ಹೋಗುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ : ಕೋರಂ ಇದ್ದರೂ ನೀವು ಸಭೆಯನ್ನು ಮುಂದೂಡಿ ಎಂದು ಹೇಳಿದರೆ ಅದು ಸಾಧುವಲ್ಲ. ಅದು ಬರೇ ರಾಜಕೀಯ ಆಗುತ್ತದೆ.

ಶ್ರೀ ಎಚ್.ಎನ್.ನಂಜೇಗೌಡ : ತಾವು ಎಷ್ಟು ಹೊತ್ತಿಗೆ ಕೋರಂ ತರುವುದು ?

ಶ್ರೀ ಕೆ.ಎನ್.ನಾಗೇಗೌಡ : ಸಾರ್ ಸದನದಲ್ಲಿ ನಿಯಾಮಾವಳಿಗಳು ಇದ್ದಾವೆ. ನಿಯಮಾವಳಿಗಳ ಪ್ರಕಾರ ಆಗ ಇರತಕ್ಕದ್ದು ಕಾಲಿಂಗ್ ಅಟೆನ್‌ಷನ್.ಕಾಲಿಂಗ್ ಅಟೆನ್‌ಷನ್ ಆದ ಮೇಲೆ ಪ್ರಶ್ನೋತ್ತರ ಇದೆ. ಕೋರಂ ಇಂಪಾರ್ಟೆಂಟೋ, ಸಬ್ಜೆಕ್ಟ್ ಇಂಪಾರ್ಟೆಂಟೋ ?

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ವರಸೆ ನೋಡಿದಿರಾ? ತಾವು ಮಾಡಿರತಕ್ಕ ತಪ್ಪಿಗೆ ಪಶ್ಚಾತ್ತಾಪ ಪಡತಕ್ಕ ಒಂದು ಸೌಜನ್ಯ ಕೂಡ ಇಲ್ಲ. ಮಿನಿಮಮ್ ಕರ್ಟೆಸಿ ಇಲ್ಲ. ಸಭೆ ಪ್ರಾರಂಭ ಆದಾಗ 4 ಜನ 5 ಜನ ಇರುತ್ತಾರೆ. ಒಬ್ಬ ಮಂತ್ರಿ ಇರುವುದಿಲ್ಲ. ಪುನಃ ನೀವೇ ಒರಟಾಗಿ ವಾದ ಮಾಡುವುದು, ಇದು ಸರಿಯಿಲ್ಲ. ಸಭೆ ಹೀಗೆ ನಡೆಯುವುದಲ್ಲ. ಜನ ನಮ್ಮನ್ನು ನೋಡಿ ನಗುತ್ತಾರೆ. ಇಲ್ಲಿ ಕೋರಂ ಇದೆ ನಡೆಸಿಕೊಂಡು ಹೋಗುತ್ತೇವೆಂದು ಹೇಳಿದರೆ ನಡೆಸಿಕೊಂಡು ಹೋಗಿ ಈಗ ನಾವೆಲ್ಲಾ ಹೊರಗಡೆ ಹೋಗುತ್ತೇವೆ. ನಿಮ್ಮನ್ನು ಜನ ಮೆಚ್ಚಿಕೊಳ್ಳುತ್ತಾರೆ. ಪರವಾಗಿಲ್ಲ ಇವರು ವಿರೋಧ ಪಕ್ಷದವರನ್ನು ಹೊರಗೆ ಕಳಿಸಿ ಸಭೆ ನಡೆಸುತ್ತಿದ್ದಾರೆ. ಭಾರೀ ಗಟ್ಟಿಗರು ಎಂದು ತಿಳಿದುಕೊಳ್ಳುತ್ತಾರೆ. ಏನು ಮಾಡುತ್ತೀರಿ? ನಿಮಗೆ ಬುದ್ಧಿ ಬರುವುದಿಲ್ಲ. ಎಷ್ಟು ಸಾರಿ ಹೇಳಬೇಕು. ಮಾನ್ಯ ಅಧ್ಯಕ್ಷರೆ, ಏನಾದರೂ ಆಲೋಚನೆ ಮಾಡಿ ಎಲ್ಲರೂ ಒಳಗೆ ಬರುವ ಹಾಗೆ ಮಾಡಬೇಕು. ದಯವಿಟ್ಟು ನಿಮ್ಮ ಛೇಂಬರಿಗಾದರೂ ಕರೆಸಿ ಮಾತನಾಡಿ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಸ್ವಸ್ಥಾನ ಬಿಟ್ಟು ಮಾತನಾಡುತ್ತಿದ್ದರು)

ಅಧ್ಯಕ್ಷರು : ಮಹಾಭಾರತದಲ್ಲಿ ಕೃಪ, ಶಲ್ಯ ಅವರೆಲ್ಲಾ ಬರುತ್ತಾರೆ ಗೊತ್ತಲ್ಲ. ಅವರು ನಮ್ಮ ಸಂಬಂಧಿಕರು, ಅವರ ಹಾಗೆ ನಾನು. ನೀವು ನಿಮ್ಮ ಸ್ಥಾನಕ್ಕೆ ಬಂದು ಮಾತನಾಡಿ.

ಶ್ರೀ ಕೆ.ಎನ್.ನಾಗೇಗೌಡ : ನೀವು ನಿಮ್ಮ ಸ್ಥಾನದಿಂದ ಮಾತನಾಡಿ, ಅದು ಸದನದ ಗೌರವ.

ಶ್ರೀ ವಾಟಾಳ್ ನಾಗರಾಜ್ : ಸದನದ ಗೌರವದ ಬಗ್ಗೆ ಮಾನ್ಯ ನಾಗೇಗೌಡರು ಮಾತನಾಡುತ್ತಾರೆ. ಹತ್ತು ಗಂಟೆಗೆ ಸದನ ಸೇರಿದೆ, 10.30ಕ್ಕೆ ಮಾನ್ಯ ನಾಗೇಗೌಡರು ಬಂದರು. ಸದನದ ಗೌರವದ ಬಗ್ಗೆ ನಮಗೆ ಹೇಳಿಕೊಡುತ್ತಾರೆ. ನಾನು 10 ಗಂಟೆಗೆ ಸಭೆ ಎಂದರೆ 9.45ಕ್ಕೆ ಬಂದಿರುತ್ತೇವೆ. ಇಲ್ಲಿ ಸದನದ ಗೌರವದ ಬಗ್ಗೆ ಹೇಳುತ್ತಾರೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ,

ಶ್ರೀ ಸಯ್ಯದ್ ಜುಲ್ಫೀಕರ್ ಹುಷ್ಮಿ : ಜನರಿಗೆ ನಾವು ಕೆಲಸ ಮಾಡಬೇಕಾಗಿದೆ. ನಮ್ಮದೂ ಸಹ ವಿಚಾರಧಾರೆ ಇದೆ, ಹೇಳಬೇಕು.

ಶ್ರೀ ಬಿ.ಸೋಮಶೇಖರ್ : ಒಂದು ನಿಮಿಷ ಇರಿ, ನಾನು ಮಾತನಾಡುತ್ತಿದ್ದೇನೆ.

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ : ನಿನ್ನೆಯ ಕಾಲಿಂಗ್ ಅಟೆನ್‌ಷನ್ ಇದೆ, ಸರ್ಕಾರ ಉತ್ತರ ಕೊಡಬೇಕು. ಬಹಳ ಇಂಪಾರ್ಟೆಂಟ್ ಇದೆ. ನಮಗೆ ಅನ್ಯಾಯ ಆಗುತ್ತಿದೆ.

ಶ್ರೀಬಿ.ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, 11 ಗಂಟೆಗೆ ಇದ್ದಂತಹ ಸಭೆಯನ್ನು 10 ಗಂಟೆಗೆ ಏಕೆ ತಾವು ಹಾಕಿಕೊಂಡಿದ್ದೀರಿ ಎಂದರೆ ವಿಶೇಷವಾಗಿ ಈ ಮೀಸಲಾತಿ ವಿಚಾರದಲ್ಲಿ ಚರ್ಚೆ ಮಾಡಬೇಕು ಎಂದು ಹೇಳಿ ತಾವು ಒಂದು ಗಂಟೆ ಮುಂಚಿತವಾಗಿ ಹಾಕಿಕೊಂಡಿದ್ದೀರಿ. ಈ ಒಂದು ವಿಚಾರ ಸಂಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಗಳ ಆಧೀನದಲ್ಲಿ ಬರತಕ್ಕದ್ದು. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮಾನ್ಯ ಸಭಾಧ್ಯಕ್ಷರ ಅನುಮತಿಯನ್ನು ಕೋರಿ ಬರುತ್ತಿದ್ದೇನೆಂದು ಹೇಳಿದ್ದಾರೆ. ನಾವು ಕೆಲವು ಮಂತ್ರಿಗಳು ಆ ಒಂದು ವಿಚಾರದಲ್ಲಿ ಆಸಕ್ತಿ ಇರುವುದರಿಂದ, ಕಳಕಳಿ ಇರುವುದರಿಂದ ನಾನು 10 ಗಂಟೆಗೇ ಬಂದೆ. ಮಾನ್ಯ ವಿರೋಧ ನಾಯಕರು ಹಾಗೂ ಮಾನ್ಯ ನಂಜೇಗೌಡರು ಸಹಿ ಮಾಡಿದ್ದಾರೆ. ಅವರೇನು ಮಾತನಾಡುತ್ತಾರೆ, ಅದನ್ನು ಸರ್ಕಾರದ ವತಿಯಿಂದ ನಾವು ಬರೆದುಕೊಳ್ಳೋಣ. ಮಾನ್ಯ ಮುಖ್ಯಮಂತ್ರಿಗಳ ಕೈಯಿಂದ ಉತ್ತರವನ್ನು ಹೇಳಿಸೋಣ ಎಂದು ನಾವು ಇಲ್ಲಿ ಬಂದು ಕುಳಿತಿದ್ದೇವೆ. ಪ್ರಶ್ನೆಗಳು ಇದ್ದಿದ್ದರೆ ಸಭೆಗೆ ಎಲ್ಲರ ಹಾಜರಾತಿ ಬೇಕಾಗಿತ್ತು. ನಾನು ಮೊದಲೇ ಬಂದ ತಕ್ಷಣ ಹೇಳಿದೆ, ವಿಷಾದ ವ್ಯಕ್ತ ಮಾಡುತ್ತೇನೆ. ತಪ್ಪಾಗಿದೆ, ಕೆಲವು ಸಾರಿ ಸರ್ಕಾರದ ಮಟ್ಟದಲ್ಲಿ ತಪ್ಪು ಆಗುತ್ತದೆ. ಎಲ್ಲಾ ಮಂತ್ರಿಗಳು,ಶಾಸಕರು ಸಭೆಗೆ ಬರುವುದಕ್ಕೆ ಆಗುವುದಿಲ್ಲ. ಆದರೆ ನಾನು ವಿಷಾದ ವ್ಯಕ್ತ ಮಾಡುತ್ತೇನೆ. ಇದನ್ನು ದೊಡ್ಡದ್ದು ಮಾಡದೇ ಈ ಒಂದು ಕಲಾಪ ನಡೆಸಿ ಎಂದು ಕೇಳಿಕೊಂಡಿದ್ದೇನೆ. ನಾನೇನೂ ಜೆಸ್ಟಿಫೈ ಮಾಡಿಕೊಂಡಿಲ್ಲ. ಇದು ಸರಿ ಎಂದು ಹೇಳುವುದಕ್ಕೆ ಹೋಗಿಲ್ಲ. ಆದರೆ ನಾನು ವಿಷಾದ ವ್ಯಕ್ತ ಮಾಡುತ್ತೇನೆ. ಆದರೆ ಈ ಸಭೆಯನ್ನು ಮುಂದೂಡಿಕೊಂಡು ಹೋಗುವುದು ಬೇಡ, ಸಭೆ ನಡೆಸಲಿ ಎಂದು ಹೇಳುತ್ತೇನೆ. ತಾವು ಸಹಿ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಅನುಮತಿಯನ್ನು ಪಡೆದು ಹೋಗಿದ್ದಾರೆ, ಮತ್ತೆ ಬರುತ್ತಾರೆ. ತಾವೇನು ಈ ವಿಚಾರದಲ್ಲಿ ಮಾತನಾಡುತ್ತೀರಿ, ಅದನ್ನು ನಾವು ಬರೆದುಕೊಳ್ಳುತ್ತೇವೆ. ಸರ್ಕಾರದ ವತಿಯಿಂದ ಉತ್ತರವನ್ನು ಕೊಡಿಸುತ್ತೇವೆ.

ಅಧ್ಯಕ್ಷರು : ಸಭೆಯನ್ನು ಸ್ವಲ್ಪ ಮುಂದೆ ಹಾಕೋಣ.

ಶ್ರೀ ಬಿ.ಸೋಮಶೇಖರ್ : ಸಭೆಯನ್ನು ಸ್ವಲ್ಪ ನಡೆಸಿಕೊಂಡು ಹೋದರೆ ಒಳ್ಳೆಯದು.

(ಗೊಂದಲ)

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ : ಸರ್ಕಾರದ ನೀತಿ ಏನು?

ಅಧ್ಯಕ್ಷರು : ನೀತಿ ಬರುತ್ತಿದೆ, ಇರಿ.

ಶ್ರೀ ಎಚ್.ಎನ್.ನಂಜೇಗೌಡ : ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಪದವನ್ನು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಉಪಯೋಗಿಸಿದೆ. ಆ ಬಗ್ಗೆ ನೀವು ಹೇಳಿದ ಮೇಲೆ ನನಗೆ ಕ್ಲಾರಿಫೈ ಆಯಿತು. I am sorry for using that word about him. It need not go into the records. ದಯವಿಟ್ಟು ಹತ್ತು ನಿಮಿಷ ಮುಂದೂಡಿ ಪ್ರಮುಖ ವಿರೋಧ ಪಕ್ಷಗಳ ಸದಸ್ಯರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾವು ವಾಕ್‌ಔಟ್ ಮಾಡೋಣ.

ಅಧ್ಯಕ್ಷರು : ಸಭೆಯನ್ನು ಮುಂದಕ್ಕೆ ಹಾಕೋಣ. ವಾಕ್‌ಔಟ್ ಏಕೆ ಮಾಡುತ್ತೀರಿ? ಈಗ ವಾಕ್‌ಔಟ್ ಬೇಡ. ಈಗ ಸಭೆಯನ್ನು ಮುಂದಕ್ಕೆ ಹಾಕುತ್ತೇನೆ. ವಾಕ್‌ಔಟ್ ಇನ್ನೊಂದು ವಿಚಾರಕ್ಕೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ :- ಸಭೆಯನ್ನು ಮುಂದಕ್ಕೆ ಹಾಕಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಹಿಡಿದರೆ ಬಿಡುವುದೇ ಇಲ್ಲವಲ್ಲ.

ಶ್ರೀ ಎಚ್.ಎನ್.ನಂಜೇಗೌಡ : ನೀವು ಏಪ್ರಿಲ್ 5ರವರೆಗೆ ಮುಂದೂಡಿದರೆ, ಭಾರೀ ಕ್ಷೇಮ.

ಶ್ರೀ ಕೆ.ಎನ್.ನಾಗೇಗೌಡ :- ಸಭೆಯನ್ನು ಹತ್ತು ನಿಮಿಷ ಮುಂದಕ್ಕೆ ಹಾಕಿ.

ಅಧ್ಯಕ್ಷರು :- ನಾನು ನಿಮ್ಮೆಲ್ಲರ ಕಲಾ ಕೌಶಲ್ಯವನ್ನು ನೋಡಿ ಆನಂದಿಸುತ್ತಿದ್ದೇನೆ. ನಿಮ್ಮಲ್ಲಿ ಏನೇನು ಟೆಕ್ನಿಕಲ್ ಪಾಯಿಂಟ್ಸ್ ಇದೆ, ಆರ್ಗ್ಯುಮೆಂಟ್ಸ್ ಎಲ್ಲಾ ಕೇಳಿ ಸ್ವಲ್ಪ ನನ್ನ ನಾಲೆಡ್ಜ್‌ಅನ್ನು ಇಂಪ್ರೂವ್ ಮಾಡಿಕೊಳ್ಳೋಣ ಎಂದು ಪ್ರಯತ್ನ ಪಡುತ್ತಿದ್ದೇನೆ. ಈಗ ಸಭೆಯನ್ನು ಮುಂದೂಡಲಾಗಿದೆ. ಪುನಃ 11 ಗಂಟೆಗೆ ನಾವು ಸಮಾವೇಶಗೊಳ್ಳುತ್ತೇವೆ.

(ಸಭೆಯು 10.39ಕ್ಕೆ ಮುಕ್ತಾಯವಾಗಿ ಮತ್ತೆ ಪುನಃ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ 11 ಗಂಟೆಗೆ 6 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

2. ಅಧ್ಯಕ್ಷರ ಅಪ್ಪಣೆ ಮೇರೆಗೆ :

ಅ) ವಿಷಯ : ಮಂಡ್ಯ ಸಕ್ಕರೆ ಮಿಲ್‌ನಲ್ಲಿ ನಡೆದಿರುವಂತಹ ಸಾವಿರಾರು ಕೋಟಿ ರೂಪಾಯಿಗಳ ಹಗರಣ

ಶ್ರೀ ಕೆ.ಎನ್.ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾನು ಮಂಡ್ಯ ಸಕ್ಕರೆ ಮಿಲ್‌ನಲ್ಲಿ ನಡೆದಿರುವಂತಹ ಸಾವಿರಾರು ಕೋಟಿ ರೂಪಾಯಿಗಳ ಹಗರಣದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ಒಂದು ಗಂಟೆಯ ಕಾಲ ಚರ್ಚೆ ಕೂಡ ನಡೆಯಿತು. ಅದಕ್ಕೆ ಸರ್ಕಾರ ಯಾವುದೇ ಜವಾಬ್ದಾರಿಯುತವಾದಂತಹ ಉತ್ತರವನ್ನು ಕೊಡಲಿಲ್ಲ. ಆದ್ದರಿಂದ ನಾನು ನಿನ್ನೆ ಧರಣಿ ಕುಳಿತಿದ್ದೆ. ಆನಂತರ ಸದನವನ್ನು ಮುಂದಕ್ಕೆ ಹಾಕಲಾಯಿತು. ನಾನು ನನ್ನ ಧರಣಿಯನ್ನು ಮುಂದುವರೆಸುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಕೆ.ಎನ್.ಪುಟ್ಟಣ್ಣಯ್ಯನವರು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಅಧ್ಯಕ್ಷರು : ನಿನ್ನೆ ಮಾಡಿದ ಧರಣಿ ನಿನ್ನೆಗೆ ಮುಕ್ತಾಯವಾಗುತ್ತದೆಯಲ್ಲವೇ? ನಿನ್ನೆಯ ಧರಣಿಯನ್ನು ಇಂದಿಗೆ ನೀವು ಹೇಗೆ ಮುಂದುವರೆಸುತ್ತೀರಿ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಿನ್ನೆ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಪ್ರಸ್ತಾಪ ಮಾಡಿದ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಏನಾದರೂ ಒಂದು ಪರಿಹಾರ ದೊರೆಯಬೇಕಲ್ಲವೇ?